ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4006
ಸದಸ್ಯರ ಹೆಸರು : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)
ಉತ್ತರಿಸುವವರು : ಶ್ರೀ ತನ್ವೀರ್ ಸೇಠ್
(ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4006

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಸಂಖ್ಯೆ	ಪ್ರಶ್ನೆ	ಉತ್ತರ
1	ತುರುವೇಕೆರೆ ತಾಲ್ಲೂಕಿನ ಐ.ಟಿ.ಐ. ಕಾಲೇಜಿನಲ್ಲಿ ಕಟ್ಟಡದ ವ್ಯವಸ್ಥೆ ಇಲ್ಲದೇ ಗುಡ್ಡೇನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಕಟ್ಟಡಕ್ಕೆ ವರ್ಗಾಯಿಸಲು ಕೋರಿದ್ದು, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?	ಹೆಚ್ಚಿನ ವ್ಯಕ್ತಿಯನ್ನು ತೆಗೆದುಕೊಂಡಲ್ಲಿ ಈಗಿರುವ ಕಟ್ಟಡ ಸಾಕಾಗುವುದಿಲ್ಲ. ಆದ್ದರಿಂದ ಗುಡ್ಡೇನಹಳ್ಳಿ ಗ್ರಾಮ ದಲ್ಲಿರುವ ಸರ್ಕಾರ ಪ್ರಥಮ ದರ್ಜೆ ಕಾಲೇಜಿಗೆ ಸೇರಿದ ಜಮೀನು ಮತ್ತು ಕೆಲವು ಕೊಠಡಿಗಳನ್ನು ಹಸ್ತಾಂತರಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರನ್ನು ಕೋರಲಾಗಿದೆ. ಅನುಮತಿ ದೊರೆತ ನಂತರ ಹೊಸ ಜಾಗಕ್ಕೆ ವರ್ಗಾಯಿಸಲಾಗುವುದು.
2	ತುರುವೇಕೆರೆ ತಾಲ್ಲೂಕಿನ ಐ.ಟಿ.ಐ. ಪರೀಕ್ಷಾ ಕೇಂದ್ರವನ್ನು ತೆರೆಯುವ ಬಗ್ಗೆ ಮನವಿ ಸಲ್ಲಿಸಿದ್ದು ಸರ್ಕಾರ ಕೈಗೊಳ್ಳಲಾದ ಕ್ರಮವೇನು?	ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಡಿಜಿಇಟಿ ನವ ದೆಹಲಿ ರವರ ಮಾರ್ಗ ಸೂಚಿಗಳಂತೆ ಹಾಗೂ ಸರ್ಕಾರಕ್ಕೆ ಆರ್ಥಿಕವಾಗಿ ಹೊರೆಯಾಗದಂತೆ ಕ್ರಮ ಕೈಗೊಳ್ಳ ಬೇಕಾಗುತ್ತದೆ. ಈಗಾಗಲೇ ತುರುವೇಕೆರೆ ಸಮೀಪದ ಕೈಗಾರಿಕಾ ತರಬೇತಿ ಸಂಸ್ಥೆ ಗಳಾದ ಅಮ್ಮಸಂದ್ರ ಮತ್ತು ತಿಪಟೂರು ಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸ ಲಾಗಿರುವುದರಿಂದ ತುರುವೇಕೆರೆಯಲ್ಲಿ ಮತ್ತೊಂದು ಪರೀಕ್ಷಾ ಕೇಂದ್ರವನ್ನು ಸದ್ಯದಲ್ಲಿ ಸ್ಥಾಪಿಸುವ ಅವಶ್ಯಕತೆಯಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ: ಉತ್ತರ ಈಗಾಗಲೇ ಎರಡನೆಯ ಬಾರಿ ಬರುತ್ತಿದೆ, ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿರತಕ್ಕಂತಹ ಐಟಿಐ ಕಾಲೇಜಿಗೆ, ಒಂದು ಸರ್ಕಾರ ಪದವಿಪೂರ್ವ ಕಾಲೇಜು ಕೂಡ ಖಾಲಿ ಇದೆ. ಈಗ ಪ್ರೈವೇಟಿನಲ್ಲಿ ಕಟ್ಟಡ ಬಾಡಿಗೆಗೆ ತೆಗೆದುಕೊಂಡು 21 ಸಾವಿರ ರೂಪಾಯಿಗಳ ಬಾಡಿಗೆ ಯನ್ನು ಕಟ್ಟುತ್ತಿದ್ದಾರೆ. ಅದು ಬೇಡ, ಸರ್ಕಾರಿ ಕಟ್ಟಡವೇ ಇರುವುದರಿಂದ ಅದನ್ನು ಪೊಸಿಶನ್‌ಗೆ ತೆಗೆದುಕೊಂಡು ಅಲ್ಲಿ ಕಾಲೇಜು ನಡೆಸಿ ಎಂದು ನಮ್ಮ ಒತ್ತಾಯವಿದ್ದರೂ ಕೂಡ, ಕಳೆದ ಶಾಸನಸಭೆಯಲ್ಲಿ ಕೇಳಿದಾಗಲು ಇದೇ ಉತ್ತರವನ್ನು ನೀಡಲಾಯಿತು, ಇದು ಕಾರ್ಯಗತವಾಗಿಲ್ಲ, ಇದು ಯಾವಾಗ ಕಾರ್ಯಗತವಾಗುತ್ತದೆ ಎನ್ನುವುದು ನಮಗೆ ಮರೀಚಿಕೆಯಾಗಿದೆ. ಸನ್ಮಾನ್ಯ ಸಚಿವರು, ದಯಮಾಡಿ, ಯಾವಾಗ ತೆಗೆದುಕೊಂಡು, ಅನ್ಯಾಯವಾಗಿ ಬಾಡಿಗೆ ಹಣವನ್ನು ಪ್ರೈವೇಟ್‌ಗೆ ಕೊಡುವುದನ್ನು ನಿಲ್ಲಿಸುತ್ತಾರೆ ಎನ್ನುವುದು ನನ್ನ ಕಳಕಳಿ ಚಿಂತನೆ. ಜೊತೆಗೆ ಒಂದು ಪರೀಕ್ಷಾ ಕೇಂದ್ರವನ್ನು ತೆರೆಯು ವುದು, ಗ್ರಾಮಾಂತರ ಲೆವೆಲ್‌ನಲ್ಲಿ, ಹೋಬಳಿವಾರು ಹೈಸ್ಕೂಲ್, ಪಿಯುಸಿ ಪರೀಕ್ಷೆಗಳು ನಡೆಯುತ್ತಿರುವಂತಹ ಸಂದರ್ಭದಲ್ಲಿ ಐಟಿಐ ಪರೀಕ್ಷೆಗೆ ತಿಪಟೂರಿಗೆ ಹೋಗುವ ಅವಶ್ಯಕತೆ ಇಲ್ಲ. ಸುಮಾರು 24–25 ಕಿ.ಮಿ. ತುರುವೇಕೆರೆಯಿಂದ ಅಲ್ಲಿಗೆ ಹೋಗಿ ನಮ್ಮ ಮಕ್ಕಳು ಪರೀಕ್ಷೆಯನ್ನು ಬರೆಯುವ ಪರಿಸ್ಥಿತಿ ಇದೆ. ದಯಮಾಡಿ ತುರುವೇಕೆರೆಯಲ್ಲಿ ಆ ಕೇಂದ್ರವನ್ನು ತೆರೆಯಬೇಕೆಂದು ನನ್ನ ವಿನಂತಿ.

ಶ್ರೀ ತನ್ವೀರ್ ಸೇಠ್: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಕಳೆದ ಭಾರಿಯು ಕೂಡ ಈ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದು, ಅವರ ಅಭಿಪ್ರಾಯ, ಅವರು ಕೊಟ್ಟಂತಹ ಸೂಚನೆಯ ಆಧಾರದ ಮೇಲೆ ಹೊಸ ವ್ಯಕ್ತಿಗಳನ್ನು ತುರುವೇಕೆರೆ ಐಟಿಐನಲ್ಲಿ ಪ್ರಾರಂಭ ಮಾಡಬೇಕೆನ್ನುವ ಉದ್ದೇಶ ದಿಂದ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣಕ್ಕೆ ಇದನ್ನು ಸ್ಥಳಾಂತರಿಸ ಬೇಕೆನ್ನುವ ಅವರ ಪತ್ರದ ಆಧಾರದ ಮೇಲೆ ನಾವು ಈಗ ಸರ್ಕಾರಿ ಕಾಲೇಜು ಶಿಕ್ಷಣ ಕಾರ್ಯದರ್ಶಿಯವರಿಗೆ ಈಗಾಗಲೇ ಪತ್ರವನ್ನು ಬರೆದಿದ್ದೇವೆ, ಬಹುಶಃ ಈ ವಾರದಲ್ಲೆ ಅನುಮತಿಯನ್ನು ಪಡೆಯುವ ವಿಶ್ವಾಸವಿದೆ. ಅದು ಬಂದ ನಂತರ ಕೂಡಲೇ ಸರ್ಕಾರಿ ಹಣವನ್ನು ಉಳಿಸುವಂತಹ ನಿಟ್ಟಿನಲ್ಲಿ ಕೂಡ ನಾವು ಈ ಪ್ರಸ್ತಾವನೆ ಆದಷ್ಟು ಬೇಗ ಪ್ರಾರಂಭವಾಗುವ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಚ್ಚಿಸುತ್ತೇನೆ. ಇವತ್ತು ಅವರೇನು ಪರೀಕ್ಷಾ ಕೇಂದ್ರವನ್ನು

ಪ್ರಾರಂಭ ಮಾಡಬೇಕೆಂದು ಕೇಳಿದ್ದಾರೆ, ನಾವು ಪರೀಕ್ಷಾ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾದರೆ ಕೇಂದ್ರ ಸರ್ಕಾರದ ಡೈರೆಕ್ಟರೇಟ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಇವರು ಕೊಟ್ಟಂತಹ ಕೆಲವು ಮಾನದಂಡಗಳನ್ನು ಆಧರಿಸಿಕೊಂಡು ನಾವು ಮಾಡಬೇಕಾಗುತ್ತದೆ. ನಾವು ಆದಷ್ಟು ಆ ಗ್ರಾಮೀಣ ಮಕ್ಕಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ತಮ್ಮ ಮೂಲಕ ನಾನು ಹೇಳಬಯಸುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ: ತುರುವೇಕೆರೆಯಲ್ಲಿ ಪರೀಕ್ಷಾ ಕೇಂದ್ರವನ್ನು ತೆರೆಯುವುದಕ್ಕೆ ಯಾವ ಮಾನದಂಡದಲ್ಲಿ ಕಡಿಮೆಯಾಗಿದೆ ಎನ್ನುವುದನ್ನು ದಯಮಾಡಿ ನನ್ನ ಗಮನಕ್ಕೆ ತರಬೇಕು. ಅಲ್ಲಿ ಡಿಲೇ ಟ್ಯಾಕ್ಟಿಸ್ ಹೊರತು ಪ್ರಾಮಾಣಿಕ ಪ್ರಯತ್ನದವಿಲ್ಲವೆನ್ನುವುದು ಇಲ್ಲಿ ಎದ್ದು ಕಾಣುತ್ತದೆ.

ಶ್ರೀ ತನ್ವೀರ್ ಸೇತ್: ಇವತ್ತು ಕೇಂದ್ರ ಸರ್ಕಾರದ ನಿಯಮಾವಳಿಯ ಪ್ರಕಾರ ಆದಷ್ಟು ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲೇ ಈ ಪರೀಕ್ಷಾ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಅದರ ಜೊತೆಗೆ ನಾವು ಅದನ್ನು ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿಕೊಂಡು ಇದನ್ನು ನಾವು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಕೆಲವು ಸುರಕ್ಷಾ ಮಾನದಂಡಗಳನ್ನು ಮುಂದಿಟ್ಟುಕೊಂಡು ಮಾನ್ಯ ಸದಸ್ಯರಿಗೆ ಕೂಲಂಕಷವಾಗಿ ಆ ಜಿಲ್ಲೆಯಲ್ಲಿ ಮಾಡುತ್ತಿರುವ ಕೆಲಸವನ್ನು ಪ್ರತ್ಯೇಕವಾಗಿ ಅವರನ್ನು ನನ್ನ ಕೊಠಡಿಗೆ ಕರೆಯಿಸಿ ಅದನ್ನು ಬಗೆಹರಿಸಲು ನಾನು ಪ್ರಯತ್ನ ಮಾಡುತ್ತೇನೆ.